ತೆಗೆದು ನೋಡಿದರೆ ಅಲ್ಲಿ ಕಳೆದ ಮೂರು ತಿಂಗಳ ಬಿಲ್ ಮಾತ್ರವೇ ಇತ್ತು. ಅದನ್ನು ನೋಡಿ ದೀಪಕನಿಗೆ ತುಂಬಾ ಸಿಟ್ಟು ಬಂತು. ಅವನು ತಂದೆಯ ಎದುರು ಧ್ವನಿ ಏರಿಸಿ ಮಾತನಾಡಿದ. ಸೊಸೆ ಕೂಡ ಹಿಂದೆ ಉಳಿಯಲಿಲ್ಲ. ಅವಳೂ ತನ್ನ ಧ್ವನಿ ಸೇರಿಸಿದಳು.

ಸಾವಿತ್ರಿಗೆ ತಾನು ಯಾರ ಪರವಾಗಿ ನಿಲ್ಲಬೇಕು ಎನ್ನುವುದೇ ತಿಳಿಯಲಿಲ್ಲ. ಅವಳು ಮೌನವಾಗಿ ತಲೆತಗ್ಗಿಸಿ ನಿಂತಳು. ಆದರೆ, ಭಾವೂ ಮಾತ್ರ ಇದಕ್ಕೂ ತನಗೂ ಸಂಬಂಧವೇ ಇಲ್ಲವೆನ್ನುವ ರೀತಿ ಕುರ್ಚಿಯಲ್ಲಿ ಶಾಂತರಾಗಿ ಕುಳಿತು ಟೀವಿ ವೀಕ್ಷಿಸುತ್ತಿದ್ದರು. ಅದನ್ನು ನೋಡಿ ಸಾವಿತ್ರಿಗೆ ಕಳವಳವಾಯಿತು. ಇವರು ಮೊದಲಿನ ಭಾವೂ ಅಲ್ಲವೇ ಅಲ್ಲ, ಈತ ಬೇರೆ ಯಾರೋ. ಇಂತಹ ಮಾತುಗಳನ್ನು ಕೇಳಿಯೂ ಅವರು ಯಾಕೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿಲ್ಲ? ಇವರು ಯಾವುದಾದರೂ ಮಾಟಕ್ಕೆ ಅಥವಾ ಆವಾಹನೆಗೆ ಬಲಿಯಾಗಿರಬಹುದೇ.

ಶೀ... ಈ ರೀತಿ ಕೆಟ್ಟ ಆಲೋಚನೆಗಳೆಲ್ಲಾ ಯಾಕೆ ನನ್ನ ಮನಸ್ಸಿನಲ್ಲಿ ಸುಳಿಯುತ್ತಿವೆ... ಈ ಕಾಲದಲ್ಲಿ ಇಂತಹದೆಲ್ಲ ನಡೆಯುವುದು ಸಾಧ್ಯವೇ. ಅದರಲ್ಲಿಯೂ ಇವರೊಂದಿಗೆ ಇಂತಹ ವ್ಯವಹಾರಗಳು ನಡೆಯುವುದು ಅಸಂಭವ. ಮನುಷ್ಯರೇ ಭೂತವಾಗಿ ಕಾಡುವ ಕಾಲವಿದು. ಸಾವಿತ್ರಿ ಈ ರೀತಿ ಆಲೋಚನೆಗಳನ್ನು ಕೊಡವಿಕೊಂಡರು. ಆದರೆ, ಭಾವೂ ನಡವಳಿಕೆಯಲ್ಲಿ ಬದಲಾವಣೆಯಾಗಲೇ ಇಲ್ಲ. ಅವರು ವಿಚಿತ್ರವಾಗಿ ನಡೆದುಕೊಳ್ಳುವುದು ಇನ್ನೂ ಹೆಚ್ಚಾಯಿತು. ಒಂದೆರಡು ಬಾರಿ ಅವಳು ಮಗ ದೀಪಕನಲ್ಲಿ ಈ ಕುರಿತು ಪ್ರಸ್ತಾಪಿಸಿದಳು. ಆದರೆ, ಅವನು ಅದರ ಕಡೆಗೆ ಲಕ್ಷವನ್ನೇ ನೀಡಲಿಲ್ಲ. ಆ ದಿನದ ಘಟನೆಯಿಂದ ಭಾವೂ ವಿಚಾರ ನೆರೆಹೊರೆಯವರಿಗೆ, ಊರಿನವರಿಗೂ ಗೊತ್ತಾಗಿಬಿಟ್ಟಿತು. ಆ ದಿನ ಮುಂಜಾನೆ ಭಾವೂ ಯಾವುದೋ ಸಾಮಾನು ತರಲೆಂದು ಮಾರ್ಕೆಟಿಗೆ ಹೋದವರು ಮರಳಿ ಬಂದಾಗ ಅವರ ಅವತಾರವೇ ಬದಲಾಗಿತ್ತು. ಅವರ ಕೈಯಲ್ಲಿ ಸಾಮಾನಿನ ಚೀಲವಿರಲಿಲ್ಲ. ಕೆಂಪು ಟೀ ಶರ್ಟ್, ನೀಲಿ ಜೀನ್ಸ್ ಪ್ಯಾಂಟ್ ತೊಟ್ಟು ತಲೆಗೆ ಹ್ಯಾಟ್ ಧರಿಸಿ, ಮವಾಲಿಗಳ ರೀತಿ ಶಿಳ್ಳೆ ಹೊಡೆಯುತ್ತಾ ಮನೆಗೆ ಬಂದವರು, ತನ್ನನ್ನು ಪ್ರಶ್ನಿಸಿದವರಲ್ಲಿ ಸಿನಿಮಾ ಶೈಲಿಯಲ್ಲಿ ಉತ್ತರಿಸಲಾರಂಭಿಸಿದ್ದರು.

ಅವರನ್ನು ಆ ಸ್ಥಿತಿಯಲ್ಲಿ ನೋಡಿ ಸಾವಿತ್ರಿಗೆ ಪ್ರಜ್ಞೆ ತಪ್ಪುವ ಹಾಗಾಯಿತು. ಆದರೂ ಅವಳು ಸಂಭಾಳಿಸಿಕೊಂಡು, ಸೊಸೆ ಮನೆಗೆ ಬರುವ ಮೊದಲೇ ಉಡುಪು ಬದಲಾಯಿಸುವಂತೆ ಭಾವೂ ಅವರಲ್ಲಿ ನೂರು ಬಾರಿ ವಿನಂತಿಸಿಕೊಂಡಳು. ಅವರ ಮಾತನ್ನು ಭಾವೂ ಕೇಳಬೇಕಲ್ಲ, ಅವರು ತಮ್ಮದೇ ಲೋಕದಲ್ಲಿ ವಿಹರಿಸುತ್ತಿದ್ದರು.

ಸಾವಿತ್ರಿ ನಿರೀಕ್ಷಿಸಿದ ಹಾಗೇ ಮಗ ದೀಪಕ್ ಮತ್ತು ಸೊಸೆ ಸೀಮಾ ಮನೆಗೆ ಬಂದ ಮೇಲೆ ದೊಡ್ಡ ಗಲಾಟೆಯೇ ನಡೆಯಿತು. ಮಗ ಮೊದಲು ಮೆಲುಧ್ವನಿಯಲ್ಲಿ ಉಡುಪು ಬದಲಾಯಿಸುವಂತೆ ತಂದೆಯಲ್ಲಿ ಕೇಳಿಕೊಂಡ. ಭಾವೂ ಅದಕ್ಕೆ ಕಿವಿಗೊಡಲಿಲ್ಲ. ದೀಪಕ ಧ್ವನಿಯೇರಿಸಿ ಹೇಳಿದ. ಭಾವೂ ಮೌನವಾಗಿಯೇ ಉಳಿದರು. ಆಮೇಲೆ ದೀಪಕನ ತಾಳ್ಮೆ ತಪ್ಪಿತು. ಅವನು ಕೈಹಾಕಿ ತಂದೆಯ ಉಡುಪನ್ನು ಬಿಚ್ಚತೊಡಗಿದ. ಭಾವೂ ಪ್ರತಿಭಟಿಸಿದರು. ದೀಪಕನನ್ನು ಹಿಂದೆ ತಳ್ಳಿ ಕೈಬೀಸಿ ಹೊಡೆಯಲಾರಂಭಿಸಿದರು. ನೆರೆಹೊರೆಯವರೆಲ್ಲಾ ಓಡಿ ಬಂದರು. ಅದನ್ನು ನೋಡಿ ದೀಪಕನಿಗೆ ಅವಮಾನವಾಯಿತು. ಅವನಿಗೆ ತಾನು ತನ್ನ ಪಾಡಿಗೆ ಇರಬೇಕಿತ್ತು ಅನಿಸಿತು.

ಮುಂದೆ ಕೆಲವು ತಿಂಗಳ ಕಾಲ ಭಾವೂ ಅದೇ ಉಡುಪಿನಲ್ಲಿ ಅದೇ ಅವತಾರದಲ್ಲಿ ಎಲ್ಲೆಡೆ ಸುತ್ತಲಾರಂಭಿಸಿದರು. ಈಗ ಅವರ ವಿಕ್ಷಿಪ್ತತೆ ಜನರಿಗೆ ಮನವರಿಕೆಯಾಗಿತ್ತು. ಬಹುಪಾಲು ಜನರಿಗೆ ಅವರ ಈ ವರ್ತನೆ ವಿಚಿತ್ರವೆನಿಸಿತು. ಕೆಲವರಂತೂ, "ಯೌವನದಲ್ಲಿ ಮಾಡಲಾಗದಿರುವುದನ್ನು ಈ ಮುದಿಪ್ರಾಯದಲ್ಲಿ ಮಾಡಿ ಮೆರೆಯುತ್ತಿದ್ದಾರೆ,' ಎಂದು ಜರಿದರು.

ಭಾವೂ ನಡವಳಿಕೆಯಿಂದ ದೀಪಕನಿಗೆ ತುಂಬಾ ಕಷ್ಟವಾಗತೊಡಗಿತು. ಸಿಕ್ಕಸಿಕ್ಕವರೆಲ್ಲರೂ ದಾರಿಯಲ್ಲಿ ತಡೆದು ಅವನ ಬಳಿ ಭಾವೂ ಕುರಿತು ವಿಚಾರಿಸುತ್ತಿದ್ದರು. ಅದು ಅವನಲ್ಲಿ ಅಸಹ್ಯ ಹುಟ್ಟಿಸುತ್ತಿತ್ತು. ಮನೆಗೆ ಬಂದ ಮೇಲೆ ವಾದ ವಿವಾದ